

ಅರುಣ ಪಿ. ಭಟ್ಟ

# ವಾರಭವಿಷ್ಯ: 22.8. 2019 ರಿಂದ 28.8.2019ರವರೆಗೆ




ವಿವಾಹ ಪ್ರಸ್ತಾವ ಬರುವುದು. ಮನೆಯ ಆರ್ಥಿಕ ಸಂಕಷ್ಟ ಬಗೆಹರಿಯುವುದು. ಕಲಾವಿದರಿಗೆ ಉತ್ತಮ ಲಾಭ. ನೌಕರಿಯಲ್ಲಿ ಪ್ರಮೋಷನ್. ಉನ್ನತ ಶಿಕ್ಷಣ ಭಾಗ್ಯ. ಆದರೆ ಕೌಟುಂಬಿಕ ಜವಾಬ್ದಾರಿಯಲ್ಲಿ ಹಿನ್ನಡೆ.

ಶುಭದಿನ: 25. ಶ್ರೀಕೃಷ್ಣ ಪೂಜೆ ಉಪವಾಸ ಮಾಡಿರಿ.




ಪ್ರಾರಂಭದ ಎರಡು ದಿನಗಳಲ್ಲಿ ಬಂಧುಗಳಿಂದ ಸುವಾರ್ತೆ. ಗೃಹ ನಿರ್ಮಾಣ ಕೆಲಸಗಳಲ್ಲಿ ಅನಿರೀಕ್ಷಿತ ಪ್ರಗತಿ. ನಿರುದ್ಯೋಗಿಗಳಿಗೆ ಉದ್ಯೋಗ ಲಾಭ. ಪತ್ನೀಪೀಡೆ. ಧನಲಾಭ. ಮಿತ್ರರಿಂದ ಅಸಂತೋಷ.

ಶುಭದಿನ: 26. ಕಾಲ ಭೈರವಾಷ್ಟಕ ಪಠಣ ಮಾಡಿರಿ.




ಬಹು ದಿನಗಳ ಗೃಹ ಕಲಹಕ್ಕೆ ಮುಕ್ತಿ. ಸ್ಪರ್ಧಾತ್ಮಕ ಪರೀಕ್ಷೆ ಅಭ್ಯರ್ಥಿಗಳಿಗೆ ಯಶಸ್ಸು. ನೌಕರರಿಗೆ ಪದೋನ್ನತಿ, ವರ್ಗಾವಣೆ. ವಾರಾಂತ್ಯದಲ್ಲಿ ಆಪ್ತರಿಂದ ಸನ್ಮಾನ. ಅನಿರೀಕ್ಷಿತ ಪ್ರವಾಸ. ಕಾಗದ ಪತ್ರಗಳ ಕೆಲಸ.

ಶುಭದಿನ: 26. ನವನಾಗ ನಾಮ ಸ್ತೋತ್ರ ಮಾಡಿರಿ.




ಸ್ವತಂತ್ರ ಉದ್ಯೋಗಸ್ಥರಿಗೆ ನಿರೀಕ್ಷೆಗಿಂತ ಲಾಭ. ವಿದ್ಯುತ್ ಕೆಲಸಗಾರರಿಗೆ ಜನರಿಂದ ಪ್ರಶಂಸೆ. ಜ್ವರ ಪೀಡೆ ಕಾಣಿಸಿತು ಎಚ್ಚರ ವಹಿಸಿ. ಮಕ್ಕಳು ಮುನಿಸಿಕೊಂಡಾರು. ಶತ್ರುಗಳ ಕಾಟ ನಡೆಯೋದಿಲ್ಲ. ಮನೆಗೆ ಅಪರೂಪದ ಅತಿಥಿಗಳ ಆಗಮನ.

ಶುಭದಿನ: 28. ಪುಷ್ಯರಾಗ ಹರಳು ಧಾರಣೆ ಮಾಡಿ.




ನೆನೆಗುದಿಗೆ ಬಿದ್ದ ಕೆಲಸಗಳು ಕೊನೆಯ ಹಂತ ತಲುಪುತ್ತವೆ. ಹೊಸ ನಿವೇಶನ ಖರೀದಿಗೆ ಸಕಾಲ. ಮನೆ ಬದಲಾಯಿಸಿದರೆ ತೊಂದರೆ. ನಿರೀಕ್ಷಿತ ಜನರಿಂದ ಸನ್ಮಾನ. ಸಂಕಟದ ಮಧ್ಯೆ ಮಿಂಚುವಿರಿ. ಹೊಸವಸ್ತು ಖರೀದಿ ಪ್ರಕ್ರಿಯೆ. ಉದರ ದೋಷ.

ಶುಭದಿನ 23. ದಶರಥ ವಿರಚಿತ ಶನಿ ಸ್ತೋತ್ರ ಮಾಡಿ.




ಉತ್ತಮವಾದ ವ್ಯವಸ್ಥೆಯಲ್ಲಿ ಇದ್ದಂತೆ ಅನ್ನಿಸಿದರೂ ಒಂದೊಂದಾಗಿ ಕರಗುವುದು. ಸೇವಕರು ತಳ ಕೀಳುವರು. ಹೆಂಡತಿಗೆ ತವರುಮನೆ ವಾಸ. ವಿವಾಹ ಪ್ರಸ್ತಾಪಕ್ಕೆ ಅನುಕೂಲ. ಮೋಜಿಗಾಗಿ ಖರ್ಚು. ಕಾಲು ನೋವು.

ಶುಭದಿನ: 27. ನವಧಾನ್ಯಗಳನ್ನು ಈಶ್ವರ ಗುಡಿಗೆ ನೀಡಿ.




ಸರ್ವ ಪ್ರಕಾರದಿಂದ ಉತ್ತಮ ದಿನಗಳು. ದೇವಾಲಯ ಪ್ರಮುಖರಿಗೆ ಸರಕಾರಿ ಅನುದಾನ ಸಿಗುತ್ತದೆ. ಗಂಡ ಯಾ ಹೆಂಡತಿಗೆ ಉತ್ಕರ್ಷ, ಸಾಮಾಜಿಕ ಮನ್ನಣೆ ಪರದೇಶ ಪ್ರವಾಸ ಯೋಗ. ವ್ಯಕ್ತಿತ್ವದ ಛಾಪು ಒತ್ತುವಿರಿ. ಮಿತ್ರರಿಂದ ಲಾಭ.

ಶುಭದಿನ: 25. ಬ್ರಹ್ಮೋತ್ತರ ಖಂಡ ಪಠಿಸಿ.




ಸಾಡೇಸಾತಿ ಐದು ತಿಂಗಳಿದೆ. ಸ್ಥಿರ ನೌಕರಿ ಪ್ರಾಪ್ತಿ. ಸತತ ಪ್ರವಾಸ. ಉನ್ನತ ಅಧಿಕಾರ ಪ್ರಾಪ್ತಿ. ರಾಜಕಾರಣಿಗಳಿಗೆ ಅತ್ಯಂತ ಶುಭ. ಬಹುದಿನದ ಪರಿಶ್ರಮಕ್ಕೆ ಪ್ರತಿಫಲ. ನವ ಜೀವನದಲ್ಲಿ ಕಾಲಿಡುವ ತರುಣರಿಗೆ ಶುಭೋದಯ.

ಶುಭದಿನ: 27. ಸುದರ್ಶನ ಜಪ 1200 ಮಾಡಿ.




ವಿದೇಶ ಪ್ರವಾಸದ ಯತ್ನ ಯಶ ಕೊಡುವುದು. ಹಣ ಖರ್ಚಾದರೂ ಸಾಮಾಜಿಕ ಮನ್ನಣೆ ಲಭಿಸುವುದು. ಬಹು ದಿನಗಳ ನಂತರ ಮಕ್ಕಳ ಬಗ್ಗೆ ಸುವಾರ್ತೆ ಕೇಳುವಿರಿ. ಉತ್ಸವ ಪ್ರದರ್ಶನಗಳಲ್ಲಿ ಭಾಗವಹಿಸುವಿರಿ. ದೇವತಾ ಪೂಜೆ.

ಶುಭದಿನ: 28. ಕುಲದೇವತಾ ಪ್ರಾರ್ಥನೆ ಮಾಡಿರಿ.




ಏಕಾದಶ ಗುರುವಿನ ಅನುಗ್ರಹ ಒಂದು ಬಿಟ್ಟರೆ ಉಳಿದ ಆಕಾಶ ಕಾಯಗಳೆಲ್ಲ ಪ್ರತಿಕೂಲವಾಗಿರುತ್ತವೆ. ಬಂಧುಗಳು ಶತ್ರುಗಳೊಡನೆ ಸೇರುವರು. ಅಷ್ಟಮದ ರವಿಕುಜರಿಂದ ಅಗ್ನಿ ಭಯವಿದೆ. ಮೂಲವ್ಯಾದಿ ಕಾಣಿಸಲಿದೆ.

ಶುಭದಿನ 26. ನವಗ್ರಹ ಶಾಂತಿ ಮಾಡಿಸಿ.




ಹೊಸಮನೆಯ ಪ್ರವೇಶಕ್ಕೆ ಸಿದ್ಧತೆಯಾಗುವುದು. ಉದ್ಯೋಗಸ್ಥ ಮಹಿಳೆಯರಿಗೆ ಉತ್ತಮ. ಕೆಲಸದಲ್ಲಿ ಪದೋನ್ನತಿಯಾಗುವುದು. ಐಚ್ಛಿಕ ಸ್ಥಳಕ್ಕೆ ವರ್ಗಾವಣೆ ಆಗುವುದು. ಆರ್ಥಿಕವಾಗಿ ನಿರೀಕ್ಷಿತ ಲಾಭ. ಕ್ರಯ ವಿಕ್ರಯಕ್ಕೆ ಸಕಾಲ.

ಶುಭದಿನ: 26. ಶಂಕರಾಚಾರ್ಯರ ಸೌಂದರ್ಯ ಲಹರಿ ಪಠಿಸಿ.




ನವ ವಿವಾಹಿತರಿಗೆ ಸಂತತಿ ಪ್ರಾಪ್ತಿಯ ಲಕ್ಷಣ. ಅನೇಕ ದಿನಗಳ ನಿರುದ್ಯೋಗ ಸಮಸ್ಯೆ ಬಗೆ ಹರಿಯುವುದು. ಹೊಟ್ಟೆ ಕಿಚ್ಚಿನ ಜನರಿಂದ ಪರೋಕ್ಷ ತೊಂದರೆ ಇದೆ. ಎಲ್ಲ ಕೆಲಸಗಳಿಂದ ಧನಲಾಭ. ಷೇರು ವ್ಯವಹಾರ ಬಂಡವಾಳದ ಹಿಡಿತವಿರಲಿ.

ಶುಭದಿನ: 28. ಗಣಪತಿಗೆ 1008 ದೂರ್ವಾರ್ಚನೆ ಮಾಡಿರಿ.

DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
